# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2329 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27.03.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆ ಸಿರವಾರ ಪಟ್ಟಣದಲ್ಲಿ ತಮ್ಮ ಇಲಾಖೆಯಿಂದ ಮಂಜೂರಾದ ಮೆಟ್ರಿಕ್ ನಂತರ ವಸತಿನಿಲಯ ಕಟ್ಟಡ ಕಾಮಗಾರಿಯನ್ನು ಯಾವ ಯೋಜನೆ ಯಲ್ಲಿ ಕೈಗೊಳ್ಳಲಾಗುತ್ತಿದೆ; ಸದರಿ ಕಾಮಗಾರಿಯ ಅಂದಾಜು ಪ್ರತಿ ನೀಡುವುದು; | ರಾಯಚೂರು ಜಿಲ್ಲೆ ಸಿರವಾರ ಪಟ್ಟಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ಮೆಟ್ರಿಕ್ ನಂತರ ವಸತಿನಿಲಯ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. ಕಾಮಗಾರಿಯ ಅಂದಾಜುಪಟ್ಟಿಯ ಪ್ರತಿಯನ್ನು http://bcwd.karnataka.gov.in ರಲ್ಲಿ ಒದಗಿಸಲಾಗಿದೆ. |
| ಆ) | ಸದರಿ ಕಾಮಗಾರಿಯನ್ನು ಇಲಾಖೆಯ ಸ್ವಂತ ಜಾಗದಲ್ಲಿ ನಡೆಯುತ್ತಿದೆಯೇ ಅಥವಾ ಬೇರೆ ಕಡೆ ನಡೆಯುತ್ತಿದೆಯೇ; ಬೇರೆ ಕಡೆ ನಡೆದಲ್ಲಿ, ಕಾಮಗಾರಿ ಕೈಗೊಳ್ಳಲು ನಿವೇಶನದ ಮಾಲೀಕ/ಇಲಾಖೆಯು ಅನುಮತಿ ನೀಡಲಾಗಿದೆಯೇ; ಅನುಮತಿ ಪಡೆದ್ದಲ್ಲಿ ಅದರ ಪ್ರತಿ ನೀಡುವುದು; | ರಾಯಚೂರು ಜಿಲ್ಲೆ ಸಿರವಾರ ಪಟ್ಟಣದಲ್ಲಿ ಮೆಟ್ರಿಕ್ ನಂತರ ವಸತಿನಿಲಯವು 1980-81ರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಇಲಾಖೆಯ ಸ್ವಂತ ಕಟ್ಟಡದಲ್ಲಿ ನಿರ್ವಹಣೆಯಾಗುತ್ತಿತ್ತು. ಸದರಿ ಕಟ್ಟಡವು ಶಿಥಿಲಗೊಂಡಿರುವುದರಿಂದ, ಈ ವಿದ್ಯಾರ್ಥಿನಿಲಯದ ಹಳೆಯ ಕಟ್ಟಡದ ಸ್ಥಳದ ಆವರಣದಲ್ಲಿಯೇ ಹೊಸದಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದೆ. |
| ಇ) | ಈ ಕಾಮಗಾರಿಯನ್ನು ಸರ್ಕಾರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಿರ್ಮಿಸಿದರೆ ಆಟದ ಮೈದಾನ ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ; ಕಾಮಗಾರಿಯನ್ನು ಸದರಿ ಸ್ಥಳದಲ್ಲಿ ನಡೆಯುವುದನ್ನು ಸಾರ್ವಜನಿಕರು ವಿರೋಧಿಸಿದರು ಸಹ ಅಲ್ಲಿಯೇ ನಡೆಸಲು ಕಾರಣಗಳೇನು; | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಆವರಣವು 4.23 ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಸದರಿ ಕಾಲೇಜಿನ ಆವರಣದಲ್ಲಿ ಪ್ರೌಢಶಾಲೆ ಮತ್ತು ವಿದ್ಯಾರ್ಥಿನಿಲಯ ಕಟ್ಟಡದ ಜಾಗವನ್ನು ಹೊರತುಪಡಿಸಿ, ಆಟದ ಮೈದಾನಕ್ಕೆ ಸ್ಥಳಾವಕಾಶವಿದ್ದು, ಆಟದ ಮೈದಾನಕ್ಕೆ ಯಾವುದೇ ತೊಂದರೆಯಾಗುವುದಿಲ್ಲ.<br><br>ಸದರಿ ಕಟ್ಟಡ ಕಾಮಗಾರಿಯನ್ನು ಸಾರ್ವಜನಿಕರು ಮತ್ತು ಸ್ಥಳೀಯ ಶಾಸಕರ ಸಮ್ಮುಖದಲ್ಲಿಯೇ ಶಂಕುಸ್ಥಾಪನೆ ಜರುಗಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ. |

...2

| | | |
|---|---|---|
| ಈ) | ವಿದ್ಯಾರ್ಥಿ ನಿಲಯ ನಿರ್ಮಿಸಲು ಪಟ್ಟಣದಲ್ಲಿ ನೂರಾರು ಸಂಖ್ಯೆಯ CA Site ಗಳು ಲಭ್ಯವಿದ್ದು, ಅಲ್ಲಿ ನಿರ್ಮಿಸಲು ಇರುವ ತೊಂದರೆಗಳೇನು? | ಸದರಿ ವಿದ್ಯಾರ್ಥಿನಿಲಯವು 1980-81ನೇ ಸಾಲಿನಿಂದ ನಿರ್ವಹಣೆಯಾಗುತ್ತಿರುವ ವಿದ್ಯಾರ್ಥಿನಿಲಯದ ಸ್ಥಳವು ನಗರದ ಕೇಂದ್ರಭಾಗದಲ್ಲಿರುವುದರಿಂದ ಹಾಗೂ ಸದರಿ ಸ್ಥಳಕ್ಕೆ ಸರ್ಕಾರಿ ಶಾಲಾ ಕಾಲೇಜುಗಳು ಹತ್ತಿರವಾಗಿರುವುದರಿಂದ, ಸದರಿ ಸ್ಥಳವು ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಿಸಲು ಯೋಗ್ಯವಾಗಿರುತ್ತದೆ.<br><br>ರಾಯಚೂರು ಜಿಲ್ಲೆಯ ಸಿರವಾರ ಪಟ್ಟಣದಲ್ಲಿ ವಿದ್ಯಾರ್ಥಿನಿಲಯ ನಿರ್ಮಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಸಿ.ಎ. ನಿವೇಶನಗಳು ಲಭ್ಯವಿರುವುದಿಲ್ಲ. |

ಸಂಖ್ಯೆ:ಹಿಂವಕ **346** ಬಿಎಂಎಸ್ **2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು